ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 70-73
Bi-Monthly, Peer-Reviewed, Open Access, Indexed Journal

ISSN: 2583-3510
SIRDF JOURNALS
editor@srujani.in
www.srujani.in

# ಮಹಿಳಾ ಕೂಲಿ ಕಾರ್ಮಿಕರ ಮೇಲೆ ಕೋವಿಡ್-19 ರ ಪರಿಣಾಮ: ಒಂದು ಅಧ್ಯಯನ

**ಹನುಮಂತ ಡ***

*ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ.

***Abstract:***

*ಕೋವಿಡ್-19 ಎಂಬ ಮಹಾಮಾರಿ ಸಾಂಕ್ರಮಿಕವು ಇಡೀ ಜಗತ್ತನ್ನೆ ಅಲುಗಾಡಿಸಿತು. ವಿಶ್ವದ ಎಲ್ಲಾ ರಾಷ್ಟ್ರಗಳು ಈ ಸಾಂಕ್ರಾಮಿಕದಿಂದ ಪರಿತಪಿಸಿದವು ಅಪಾರವಾದ ಸಾವು-ನೋವು, ನಿರುದ್ಯೋಗ, ಆರ್ಥಿಕ ಹಿಂಜರಿತ, ಮಾನಸಿಕ ಭಯ ಹೀಗೆ ಕೋವಿಡ್-19 ವಿವಿಧ ಸಮಸ್ಯೆಗಳನ್ನು ತಂದೊಡ್ಡಿತು. ಪ್ರಮುಖವಾಗಿ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳು ತಳಮಟ್ಟ ತಲುಪಿದವು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ, ಔದ್ಯೋಗಿಕ ಮುಂತಾದ ಕ್ಷೇತ್ರಗಳ ಪ್ರಗತಿಗೆ ಕಡಿವಾಣ ಹಾಕಿತು. ಇದು ಈ ಶತಮಾನದ ಮಹಾ ದುರಂತವೇ ಸರಿ. ಈ ಹಿನ್ನಲೆಯಲ್ಲಿ ಮಹಿಳಾ ಕೂಲಿಕಾರ್ಮಿಕರ ಮೇಲೆ ಕೋವಿಡ್-19 ಬೀರಿದ ಪರಿಣಾಮವೇನು ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಮಹಿಳೆ, ಕೂಲಿ ಕಾರ್ಮಿಕರು, ಕೋವಿಡ್-19, ಆರ್ಥಿಕತೆ.*

## ಪೀಠಿಕೆ

ಕೊರೋನಾ ಎಂಬ ಮಹಾಮಾರಿಯು ಜಗತ್ತಿನ ಎಲ್ಲರನ್ನು ಭಯದ ಕರಿನೆರಳಿನಲ್ಲಿ ಜೀವನ ದೂಡುವಂತೆ ಮಾಡಿತು. ಮನುಷ್ಯ ಇಂದು ಎಷ್ಟೆ ಎತ್ತರಕ್ಕೆ ಸಾಗಿದ್ದರೂ ಕೂಡ ಕಣ್ಣಿಗೆ ಕಾಣದ ವೈರಸ್ ಮಾನವ ಸಂಕುಲವೇ ಮನೆಯೊಳಗೆ ಬಂಧಿಯಾಗುವಂತೆ ಮಾಡಿತು. ಆರಂಭದ ದಿನದಲ್ಲಿ ಉಸಿರಾಡಲು ಯೋಚಿಸುವಂತಹ, ಮನ-ಮನೆಯೊಳಗಿನ ಸದಸ್ಯರನ್ನೇ ಮುಟ್ಟಲಾರದ ಸ್ಥಿತಿಯನ್ನು ನಿರ್ಮಿಸಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮುಂತಾದ ಎಲ್ಲಾ ಕ್ಷೇತ್ರಗಳ ಮುನ್ನಡೆಗೆ ತಡೆಯೊಡ್ಡಿತು. ಕೊರೋನಾ ಸಾಂಕ್ರಾಮಿಕ ರೋಗಕ್ಕಿಂತ ಅದರ ಭಯ ಮತ್ತು ಅದರಿಂದಾದ ಪರಿಣಾಮದಿಂದಾಗಿ ಉಂಟಾದ ಹಸಿವಿನಿಂದಲೇ ಹೆಚ್ಚು ಜನ ಜೀವ ಮತ್ತು ಜೀವನ ಕಳೆದುಕೊಂಡರು. ಇವೆಲ್ಲ ಅತ್ಯಂತ ಹೃದಯ ವಿದ್ರಾವಕವಾದವುಗಳು.

ಇವೆಲ್ಲದರ ನಡುವೆ ಮಾನವೀಯತೆ ಉಸಿರಾಡುತ್ತಿತ್ತು. ಸಂಕಷ್ಟದಲ್ಲಿದ್ದ ಅನೇಕರನ್ನು ವಿವಿಧ ರೂಪದಲ್ಲಿ ಕೈಹಿಡಿದರು. ಇದ್ದವರು ಇಲ್ಲದವರಿಗೆ ಸಹಾಯ ಹಸ್ತ ಚಾಚಿದರು. ಇಡೀ ಜಗತ್ತು ನಿಂತಿರುವುದು ಮಾನವೀಯತೆ, ಪ್ರೀತಿ, ನಂಬಿಕೆಯ ಮೇಲೆ ಎಂಬುದನ್ನು ಸಾಬೀತು ಪಡಿಸಿದರು. ಗಿಡ ಬಳ್ಳಿಗೆ ಆಸರೆ ನೀಡುವಂತೆ, ಮರವೊಂದು ನೂರಾರು ಜೀವ ಸಂಕುಲಕ್ಕೆ ಆಶ್ರಯ ನೀಡುವಂತೆ ಅನೇಕ ಮಹನೀಯರು ಹೃದಯವಂತರು ನಿರ್ಗತಿಕರಿಗೆ ಸಹಾಯ ಮಾಡಿದರು. ಇತ್ತ ಉದ್ಯೋಗವು ಇಲ್ಲದೆ ಹೊಟ್ಟೆಗೆ ಊಟವು ಇಲ್ಲದೆ ಊರಿಗೆ ಹೋಗಲು ಸಾರಿಗೆಯ ವ್ಯವಸ್ಥೆಯೂ ಇಲ್ಲದೆ ಮಕ್ಕಳನ್ನು

***Please cite this article as:*** ಹನುಮಂತ ಡಿ. (2022). ಮಹಿಳಾ ಕೂಲಿ ಕಾರ್ಮಿಕರ ಮೇಲೆ ಕೋವಿಡ್-19ರ ಪರಿಣಾಮ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(3), 70–73.

ಕಟ್ಟಿಕೊಂಡು ಬರಿಗೈ, ಬರಿಹೊಟ್ಟೆ, ಬರಿಗಾಲಲ್ಲಿ ಹೊರಟ ವಲಸೆ ಕಾರ್ಮಿಕರನ್ನು ಅಲ್ಲಲ್ಲಿ ಉಪಚರಿಸಿ ಮೂಲಭೂತ ಅವಶ್ಯಕತೆಯನ್ನು ಸಾರ್ವಜನಿಕರು ಪೂರೈಸಿದರು. ಜೀವದ ಹಂಗು ತೊರೆದು ದಾದಿಯರು, ವೈದ್ಯರು, ಪೋಲಿಸರು, ಅಧಿಕಾರಿಗಳು, ಸಾವಿರಾರು ಸ್ವಯಂ ಸೇವಕರು ತಮ್ಮ ಕೈಲಾದ ಸಹಾಯ ಮಾಡಿ ಮಾನವೀಯತೆ ಮೆರೆದರು.

**ಮಹಿಳಾ ಕಾರ್ಮಿಕರು ಸಮಸ್ಯೆಗಳು**

ಮೊದಲ ಬಾರಿ ಕೊರೋನಾ ವ್ಯಾಪಿಸಿದ ಸಂದರ್ಭದಲ್ಲಿ ನಲವತ್ತೈದು ದಿನಗಳ ಲಾಕ್‌ಡೌನ್ ಮಾಡಲಾಯಿತು. ಈ ಸಂದರ್ಭದಲ್ಲಿ ಎಲ್ಲರೂ ವಿವಿಧ ರೀತಿಯ ಸಮಸ್ಯೆಗೆ ಒಳಗಾದರು. ಅದರಂತೆ ಕೂಲಿಕಾರ್ಮಿಕರು ಅದರಲ್ಲೂ ನಗರ ಪ್ರದೇಶಗಳಿಗೆ ವಲಸೆ ಬಂದು ಕಟ್ಟಡ ಕಾರ್ಮಿಕರಾಗಿ ಕಾರ್ಮಿಕರಾಗಿ ದುಡಿಯುತ್ತಿದ್ದವರ ಸಮಸ್ಯೆ ಹೇಳತೀರದು. ಕೋವಿಡ್ ಸಂದರ್ಭದಲ್ಲಿ ಮಹಿಳೆಯರ ಬದುಕು ತುಂಬಾ ಶೋಚನೀಯವಾಗಿತ್ತು. ಏಕೆಂದರೆ ಮೊದಲಿನಿಂದಲೂ ಮಹಿಳೆಯರ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಿರಂತರವಾಗಿ ಶೋಷಣೆ ನಡೆಯುತ್ತಲೇ ಬಂದಿರುವುದನ್ನು ನಾವು ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ನೋಡಿದ್ದೇವೆ. ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ಕಡಿಮೆ ಸಂಬಳ, ಹೆಚ್ಚು ದುಡಿಮೆ, ದೌರ್ಜನ್ಯ, ಕಿರುಕುಳ, ಅನಾರೋಗ್ಯಕರ ಪರಿಸರದಲ್ಲಿ ದುಡಿಮೆ ಮಾಡಬೇಕಾಯಿತು.[1]

ಕೆಲವೊಂದು ಪ್ರದೇಶಗಳಲ್ಲಿ ಮಹಿಳೆಯರಿಗೆ ಪ್ರಧಾನ ಸ್ಥಾನಮಾನಗಳು ಸಿಗದ ಕಡೆಯಲ್ಲಿ ಇಂತಹ ಸ್ಥಿತಿಗಳನ್ನು ಕಾಣುತ್ತೇವೆ. ಮಾರುಕಟ್ಟೆಯ ವಿವಿಧ ನೆಲೆಯಲ್ಲಿ ಕಾಣದ ಕೈಗಳು ದೊಡ್ಡದೊಡ್ಡ ಪಟ್ಟಣಗಳಲ್ಲಿ ಮಹಿಳಾ ಕಿರುಕುಳಗಳ ಛಾಯೆಗಳು ನಡೆದಿರುವುದು ದಿನಪತ್ರಿಕೆಗಳಲ್ಲಿ ನೋಡಿರುತ್ತೇವೆ. ಉದಾ: ಕಡಿಮೆ ಸಂಬಳವಿದ್ದಾಗಲೂ ಕೂಡಹೆಚ್ಚು ದುಡಿಮೆ ಮಾಡುವುದು. ಇಂತಹ ಸ್ಥಳದಲ್ಲಿ ಮಹಿಳೆಯರಿಗೆ ದೌರ್ಜನ್ಯ, ಲೈಂಗಿಕ ಕಿರುಕುಳ, ಚುಡಾಯಿಸುವಿಕೆ ಸಾಮಾನ್ಯವಾಗಿರುತ್ತದೆ. "ಕೆಲವು ಕಡೆ ಉತ್ತಮ ಶಿಕ್ಷಣ ಪಡೆದಿರುವ ಮಹಿಳೆಯರು ಇವುಗಳಿಂದ ಮುಕ್ತವಾಗಿಲ್ಲ"[2] ಮಹಿಳೆಯರಿಗೆ ಉದ್ಯೋಗವು ಆರ್ಥಿಕವಾಗಿ ಅವಶ್ಯವಾಗಿರುವುದರಿಂದ ಯಾವುದೇ ಸಂದರ್ಭದಲ್ಲಿ ಅವರು ಇದನ್ನು ಕಳೆದುಕೊಳ್ಳಲು ಇಚ್ಚಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಮಹಿಳೆಯರು ಕಾನೂನು ಹೋರಾಟ ಮಾಡಲು ಮುಂದೆ ಬರಲು ಹಿಂದೇಟು ಹಾಕಿರುವ ಸಂದರ್ಭಗಳು ನಮಗೆ ಅನೇಕ ಕಡೆ ಕಾಣಸಿಗುತ್ತವೆ. "ಒರಿಸ್ಸಾದ ಗಣಿಗಳಲ್ಲಂತೂ ಮಹಿಳೆಯರು ರಾತ್ರಿಯಲ್ಲಿ ದುಡಿಯಬೇಕು."[3] ಇಷ್ಟೆಲ್ಲಾ ಸಮಸ್ಯೆಗಳನ್ನು ಮಹಿಳೆಯರು ಎದುರಿಸಿದ್ದರೂ ಸಮಾಜದಲ್ಲಿ ತಮ್ಮನ್ನು ಸಬಲೀಕರಣಗೊಳಿಸಿಕೊಳ್ಳಲು ಮತ್ತು ಬದುಕಲು ಕೆಲಸದ ಸಮಯದಲ್ಲಿ ಆದಂತಹ ತೊಂದರೆಗಳನ್ನು ಸಹಿಸಿಕೊಳ್ಳುತಿದ್ದರು.

**ಮಹಿಳಾ ಕಾರ್ಮಿಕರ ಮೇಲೆ ಕೊವೀಡ್–19 ರ ಪರಿಣಾಮ**

ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಮಹಿಳೆಯರು ಸಹಿಸಿಕೊಂಡು ತನ್ನ ದುಡಿಮೆಯನ್ನು ನಂಬಿಕೊಂಡು ಜೀವನವನ್ನು ಸಾಗಿಸುವ ಸಮಯದಲ್ಲಿ ಒಂದು ದೊಡ್ಡ ಗಂಡಾತರವಾಗಿ ಕಾಣಿಸಿಕೊಂಡದ್ದು ಕೋವಿಡ್–19 ಎಂಬ ಮಹಾಮಾರಿ. ಈ ಸಮಯದಲ್ಲಿ ಮಹಿಳಾ ಕಾರ್ಮಿಕರು ಬದುಕು ಸಂಕಷ್ಟಕ್ಕೆ ದೂಡಲ್ಪಟ್ಟಿತು. ಮಹಿಳೆಗೆ ತನ್ನ ಬದುಕನ್ನು ಸಾಗಿಸಲು ಮೊದಲು ಇದ್ದಂತಹ

[1] ವಾರ್ತಾಭಾರತಿ, 24ನೇ ಜೂನ್, 2020
[2] ಶಿವಾನಂದಎಸ್. ವಿರಕ್ತಮಠ. (2010). ಮಹಿಳಾ ಮತ್ತು ಧರ್ಮ. ಪು.ಸಂ. 25,
[3] ಜನಶಕ್ತಿ, ಸಂಪುಟ–9,ಪು.ಸಂ. 21

ಕೆಲಸವು ಕೈಬಿಟ್ಟು ಹೋದಾಗ ಜೀವನ ನಿರ್ವಹಣೆಗೂ ಅನೇಕ ಅಡ್ಡಿ ಆತಂಕಗಳು ಉಂಟಾದವು. ಕೆಲವೊಂದು ಸಮಯದಲ್ಲಿ ಒಂದೊತ್ತಿನ ಊಟಕ್ಕೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

**ಗ್ರಾಮೀಣ ಭಾಗದ ಮಹಿಳಾ ಕಾರ್ಮಿಕರ ಸಮಸ್ಯೆಗಳು**

ಗ್ರಾಮೀಣ ಭಾಗದಲ್ಲಿ ಕೊರೋನಾದ ಪ್ರಭಾವ ಹೆಚ್ಚಾಗಿ ಕಾಣದಿದ್ದರೂ ಅದರ ತೀವ್ರತೆಯ ಪ್ರಭಾವ ಹೆಚ್ಚಾಗಿತ್ತು. ಅಂತೆಯೇ ಇಡೀ ದೇಶಕ್ಕೆ ವಿಧಿಸಲಾಗಿದ್ದ ನಿಯಮವು ವ್ಯಾಪ್ತಿಯಲ್ಲಿ ವಿಸ್ತರಣೆಗೊಂಡಿತು. ಹಳ್ಳಿ ಭಾಗದ ಜನರಿಗೂ ಅನ್ವಯವಾಗಿತ್ತು. ಆದ್ದರಿಂದ ಬಹುತೇಕ ಹಳ್ಳಿಯಲ್ಲಿ ಅಂಗಡಿಗಳನ್ನು, ಹೋಟೆಲ್‌ಗಳು, ಗುಡಿ ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದವು. ಅಲ್ಲದೆ "ಮದುವೆ, ನಾಮಕರಣ, ಗೃಹ ಪ್ರವೇಶ ಕಾರ್ಯಕ್ರಮಗಳನ್ನು ಹಠಾತ್ತಾಗಿ ಸ್ಥಗಿತಗೊಳಿಸಿದ್ದರಿಂದ ಎಲ್ಲಾ ವರ್ಗದ ಜನರಿಗೂ ನಷ್ಟ ಉಂಟಾಯಿತು."[4] ಅದರಲ್ಲೂ ಪ್ರತಿನಿತ್ಯ ಕೂಲಿಯಿಂದಲೇ ದುಡಿದು ತಿನ್ನುವ ದಿನಗೂಲಿ ನೌಕರರಿಗೆ ಸಮಸ್ಯೆಗಳ ಸರಮಾಲೆಯೇ ಸಂಭವಿಸಿತು.

ಮಹಿಳಾ ಪ್ರಧಾನ ಕುಟುಂಬಗಳಲ್ಲಿ ಕೂಲಿಗಾಗಿ ತೆರಳುವಂತಿಲ್ಲ; ಹೋದರೂ ದುಡಿಸಿಕೊಳ್ಳುವಂತಿಲ್ಲ. ಹೀಗಿರುವಾಗ ದಿನಗೂಲಿ ಸಿಗದೇ ತುತ್ತು ಅನ್ನಕ್ಕೂ ಪರದಾಡುವಂತಾಯಿತು. ಇದರ ನಡುವೆ ಕೆಲ ಸಂಘ-ಸಂಸ್ಥೆಗಳು ನೀಡಿದ ಆಹಾರ ಸಾಮಗ್ರಿಗಳು ಕೆಲವರಿಗೆ ಮಾತ್ರ ಹಂಚಿಕೆಯಾಗಿತ್ತು. ಮಕ್ಕಳಿಗೆ ಹಾಲು ಸಿಗದೇ ಅಳತೊಡಗಿದವು. ಇನ್ನೂ ಕೆಲವು ಸಾಮಾಜಿಕ ನಿರ್ಬಂಧಗಳಿಂದಾಗಿ ಗ್ರಾಮೀಣ ಮಹಿಳೆಯರಿಗೆ ಗುಣಮಟ್ಟವಾದ ಆರೋಗ್ಯ ಸೇವೆಗಳು ಅಗತ್ಯ ಔಷಧಿಗಳು ಮತ್ತು ಲಸಿಕೆಗಳು ಪಡೆಯುವ ಸಾಧ್ಯತೆ ಕಡಿಮೆಯಾಯಿತು. ಇದಲ್ಲದೇ ಅವರಲ್ಲಿ ಹೆಚ್ಚಿನವರು ತಪ್ಪು ಮಾಹಿತಿಯ ಹರಡುವಿಕೆ ಮತ್ತು ತಂತ್ರಜ್ಞಾನದ ಕೊರತೆಯನ್ನು ಅನುಭವಿಸುತಿದ್ದಾರೆ. ಇದು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಮಹಿಳೆಯರಿಗೆ ಬಹು ದೊಡ್ಡ ಸಮಸ್ಯೆಯಾಗಿದೆ. ಈ ಮಹಿಳೆಯರು ತಮ್ಮ ಮನೆಯ ಸದಸ್ಯರ ಆರೋಗ್ಯ ನೋಡಿಕೊಳ್ಳುತ್ತಾ ತಮ್ಮ ಆರೋಗ್ಯದ ಕಾಳಜಿ ವಹಿಸುವುದನ್ನು ನಿರ್ಲಕ್ಷಿಸುತ್ತಾರೆ.

**ನಗರದ ಮಹಿಳಾ ಕೂಲಿ ಕಾರ್ಮಿಕರ ಸಮಸ್ಯೆಗಳು**

ಬಹುತೇಕವಾಗಿ ಲಾಕ್‌ಡೌನ್ ಸಮಸ್ಯೆಗಳು ಎದುರಾಗಿದ್ದು ನಗರಗಳಲ್ಲಿ. ಪ್ರತಿನಿತ್ಯ ಬಳಕೆಯ ಸಾಮಗ್ರಿಗಳು ಗ್ರಾಮೀಣ ಭಾಗದಿಂದ ಬರುತ್ತಿದ್ದವು. ಆದರೆ ಈಗ ಎಲ್ಲವೂ ಸ್ತಬ್ದಗೊಂಡಿದ್ದರಿಂದ ಎಲ್ಲದಕ್ಕೂ ಪರದಾಡುವಂತಾಯಿತು. ದಿನದಿಂದ ದಿನಕ್ಕೆ ನಾಗಾಲೋಟದ ವೇಗದಲ್ಲಿ ಸಾಗುತ್ತಿದ್ದ ಕೊರೋನಾ ತಗುಲಿದ ಸೋಂಕಿತರ ಸಂಖ್ಯೆ ನೋಡಿ ಭಯವಾಗುತ್ತಿತ್ತು.

ಕರೋನಾ ಎಲ್ಲೆಡೆ ಹರಡಿದ್ದರೂ ಸಹ ದಿನ ಬಿಟ್ಟು ದಿನ ಕೆಲಸಕ್ಕಾಗಿ ಆಫೀಸಿಗೆ ಬಂದು ಕೆಲಸ ಮಾಡಬೇಕಿತ್ತು. ಅಲ್ಲದೆ ವಾರದಲ್ಲಿ ಮಾಡಬೇಕಾದ ಕೆಲಸವನ್ನು ದಿನಗಳಲ್ಲಿ ಮಾಡಬೇಕಿತ್ತು. ಅಲ್ಲದೆ ಪ್ರತಿಸಾರಿಯೂ ಸ್ಯಾನಿಟೈಸರ್, ಮಾಸ್ಕ್ ಮತ್ತಿತರ ರಕ್ಷಣಾ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕಿತ್ತು. ಆದರೆ ಇಷ್ಟೆಲ್ಲಾ ಕಷ್ಟ ಪಟ್ಟರೂ ಸಂಬಳ ಅವಶ್ಯಕಾಲದಲ್ಲಿ ಸೇರುತ್ತಿರಲಿಲ್ಲ. "ಏನಾದರೂ ಕರೋನಾ ಸೋಂಕಿತರು ಅಕ್ಕಪಕ್ಕದಲ್ಲಿಯೇ ಕಂಡುಬಂದರೆ ವರ್ಕ್‌ಫ್ರಮ್ ಹೋಮ್ ಎಂಬ ಹೊಸ ನೇಮಕ್ಕೆ ಬದ್ಧರಾಗಬೇಕಾಗಿ. ಅಲ್ಲದೆ ಮನೆಯನ್ನೇ ಸ್ವಯಿಚ್ಛೆಯಿಂದ ಕಾರಾಗೃಹವನ್ನಾಗಿ ಮಾಡಿಕೊಳ್ಳಬೇಕಿತ್ತು."[5]

---

[4] ವಕ್ತೃ: ಯಂಕಮ್ಮ ಹಚ್ಚೊಳ್ಳಿ, ಬಿಜಿದಿನ್ನಿ ಗ್ರಾಮ

[5] ವಕ್ತೃ: ನಿರ್ಮಲದೇವಿ, ಬೆರಳಚ್ಚುಗಾರರು, ನ್ಯಾಯಾಲಯ ಆವರಣ, ಸಿರಗುಪ್ಪ ಪಟ್ಟಣ

"ವಲಸೆ ಬಂದ ಮಹಿಳಾ ಕಾರ್ಮಿಕರು ದುಡಿಯಲು ಕೆಲಸವಿಲ್ಲದೆ ವಾಸಿಸಲು ನೆಲೆ ಇಲ್ಲದೆ ಊಟವಿಲ್ಲದೆ ಹಣವಿಲ್ಲದೆ ಕ್ಷಣ ಕ್ಷಣಕ್ಕೂ ಪರದಾಡುವಂತಾಯಿತು. ಹೀಗಿರುವಾಗ ಹಳ್ಳಿಗಳಿಗೆ ವಾಪಸಾಗಿ ಬಾಳೋಣ ಬದುಕೋಣ ಎಂದರೆ ಊರನ್ನು ಸೇರಲು ಸಾರಿಗೆ ವ್ಯವಸ್ಥೆಯಿರಲಿಲ್ಲ."[6] ಸ್ವಂತ ವಾಹನಗಳಲ್ಲಿ ಹೋಗಲು ಅಪ್ಪಣೆಯಿಲ್ಲದೆ ಇದ್ದಲ್ಲಿಯೇ ಇದ್ದು ನಿಂತ ನೀರಿನಂತೆ ಕೊಳೆಯಲಾರಂಭಿಸಿದರು. ಆಗ ಲಾಕ್ಡೌನ್ ಸ್ವಲ್ಪ ಸಡಿಲಗೊಂಡಿದ್ದರಿಂದಾಗಿ ನಗರದ ಬಹುತೇಕ ಸಜ್ಜನ ನಾಗರಿಕರು ಬಡವರಿಗೆ ದವಸ–ಧಾನ್ಯಗಳನ್ನು ನೀಡಿದರು. ಆದರೆ ಅವು ಅಲ್ಪಕಾಲಿಕ. ಅಂತೆಯೇ ಹಲವು ಪರೀಕ್ಷೆಗಳ ನಂತರ ಮಕ್ಕಳು ಎತ್ತಿಕೊಂಡು ನಡೆದುಕೊಂಡು ಬಸ್ಸಿಗೆ ಹತ್ತಿಕೊಂಡು ಊರಿಗೆ ಧಾವಿಸುತ್ತಿದರು. ಅದಾದನಂತರದ ದಿನಗಳ ಕಾಲ ಹೋಂ ಕ್ವಾರಂಟೈನ್‌ನಲ್ಲಿ ಒಂಟಿಯಾಗಿ ಇರಬೇಕಿತ್ತು.

**ಉಪಸಂಹಾರ**

ಒಟ್ಟಾರೆಯಾಗಿ 2020ರ ವರ್ಷದ ಸಂದರ್ಭದಲ್ಲಿ 'ಜಗತ್ತಿನಲ್ಲಿ ನಾನೇ ದೊಡ್ಡಣ್ಣ ಜಗತ್ತಿಗೆಲ್ಲಾ ನನ್ನ ಅಣುಶಕ್ತಿಯೇ ಶ್ರೇಷ್ಠ' ಜಗತ್ತಿಗೆ ನನ್ನ ತಂತ್ರಜ್ಞಾನವೇ ಮೇಲು ಎಂದೆಲ್ಲಾ ಬೀಗುತ್ತಿದ್ದಂತಹ ದೇಶಗಳು ಕೋವಿಡ್–19 ಮಹಾಮಾರಿಗೆ ತಲೆಬಾಗಬೇಕಾಯಿತು. ಪ್ರಪಂಚಾದ್ಯಂತ ಕರೋನಾದಿಂದ ಆದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಔದ್ಯೋಗಿಕ, ಧಾರ್ಮಿಕ, ಹತ್ತು ಹಲವಾರು ಕ್ಷೇತ್ರಗಳು ಕುಂಟಿತಗೊಂಡವು.

ಮಹಿಳೆಯರು ಕೂಡ ಈ ಕೊರೊನಾ ಸಮಯದಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೂ ಮತ್ತು ನಗರ ಪ್ರದೇಶದ ಮಹಿಳೆಯರು ಕಠಿಣವಾದ ಸಮಸ್ಯೆಗಳನ್ನು ಎದುರಿಸಿದರು. ಅವರು ಬದುಕು ಕಟ್ಟಿಕೊಳ್ಳಲು ಪಟ್ಟಂತಹ ಕಷ್ಟ ಅಷ್ಟಿಷ್ಟಲ್ಲ. ಹೀಗೆ ಹತ್ತು ಹಲವು ಸಮಸ್ಯೆಗಳನ್ನು ಮಹಿಳಾ ವರ್ಗವು ಅನುಭವಿಸಿತು. ತದನಂತರ ಕಾಲಕ್ರಮೇಣ ಸೋಂಕಿತರ ಸಂಖ್ಯೆ ಕಡಿಮೆಯಾಗಿ ಲಾಕ್ಡೌನ್ ಸಡಿಲಗೊಂಡಂತೆಲ್ಲ ಮಹಿಳಾ ಕೂಲಿ ಕಾರ್ಮಿಕರ ಜೀವನ ಸ್ಥಿತಿ ಸುಧಾರಣೆಗೊಳ್ಳುತ್ತಿರುವಾಗ ಎಲ್ಲವೂ ಮೊದಲ ಸುಸ್ಥಿತಿಗೆ ಬರಲಾರಂಭಿಸಿ ಮಹಿಳೆಯರ ಸಮಸ್ಯೆಗಳು ತಕ್ಕ ಮಟ್ಟಿಗೆ ಸುಧಾರಿಸಿಕೊಂಡವು.

**ವಕ್ತೃ ವಿವರ:**

- ಈರಮ್ಮ ಹರಿಜನ, ಸಿರಗುಪ್ಪ ಪಟ್ಟಣ.
- ನಿರ್ಮಲದೇವಿ, ಬೆರಳಚ್ಚುಗಾರರು, ನ್ಯಾಯಾಲಯ ಆವರಣ, ಸಿರಗುಪ್ಪ ಪಟ್ಟಣ.
- ಯಂಕಮ್ಮ ಹಚ್ಚೊಳ್ಳಿ, ಬಿಜಿದಿನ್ನಿ ಗ್ರಾಮ.

**ಪರಾಮರ್ಶನ ಗ್ರಂಥಗಳು**


- ಚೆನ್ನಮ್ಮ ಕೆ.ಸಿ. (2010). ಮಹಿಳಾ ದುಡಿಮೆಯ ಏಕರೂಪತೆಯ ಪ್ರಶ್ನೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಛಾಯಾ ದೇವಂಕರ. (2005). ಮಹಿಳಾ ದುಡಿಮೆ ಮತ್ತು ಜಾಗತೀಕರಣ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ನಾಗಮೋಹನ್ ದಾಸ್ ಎಚ್.ಎನ್. (2014). ಮಹಿಳಾ ಅಸಮಾನತೆ. ಚಿಂತನ ಪುಸ್ತಕ.
- ಶಿವಾನಂದ ಎಸ್. ವಿರಕ್ತಮಠ. (2010). ಮಹಿಳಾ ಮತ್ತು ಧರ್ಮ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.


[6] ವಕ್ತೃ: ಈರಮ್ಮ ಹರಿಜನ, ಸಿರಗುಪ್ಪ.